ಗುರುವಾರ 15.01.2026
ಬೆಂಗಳೂರು, ಬೆಲೆ: 5ರೂ,
2 ಪುಟಗಳು
ಸಂಪುಟ 01 - ಸಂಚಿಕೆ 120
Digital Varthe Kannada Daily
Volume 01 - Issue 120
Thursday 13.01.2026
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ
ಕನ್ನಡ ದಿನಪತ್ರಿಕೆ

DIGITAL VARTHE
digitalvarthe@gmail.com
www.digitalvarthe.com

## ಬಡವರಿಗೆ ನೆರವಾಗುವುದು ಸಮಾಜಮುಖಿ ಕಾರ್ಯ: ಎಸ್.ಟಿ.ಎಸ್



**ಯಶವಂತಪುರ :** ಉಳ್ಳವರು ಬಡವರಿಗೆ ನೆರವಾಗುವುದು ಅತ್ಯುತ್ತಮ ಸಮಾಜಮುಖಿ ಕಾರ್ಯ ಎಂದು ಶಾಸಕ ಎಸ್.ಟಿ ಸೋಮಶೇಖರ್ ತಿಳಿಸಿದರು.

ಕ್ಷೇತ್ರದ ಅಂದ್ರಹಳ್ಳಿ ವಾರ್ಡ್‌ನ ಆಚಾರ್ಯ ಕಾಲೇಜು ಬಳಿಯ ಚಾಲುಕ್ಯನಗರದಲ್ಲಿ ಕಾಂಗ್ರೆಸ್ ಮುಖಂಡ ಜಿಬಿಎ ಚುನಾವಣಾ ಪ್ರಬಲ ಆಕಾಂಕ್ಷಿ ವಿ.ನಾಗರಾಜು ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜನತೆಗೆ ಸಂಕ್ರಾಂತಿ ಕಿಟ್ ವಿತರಿಸಿ ಮಾತನಾಡಿದರು.

ಒಕ್ಕಲುತನದ ದ್ಯೋತಕ ಸುಗ್ಗಿ ಸಂಕ್ರಾಂತಿಯಲ್ಲಿ ರೈತರು ಕಣದಲ್ಲೆ ರಾಗಿ, ಭತ್ತ ಇತ್ಯಾದಿ ದವಸ ಧಾನ್ಯಗಳನ್ನು ಮೊರದಲ್ಲಿ ತುಂಬಿ ಬಡವರಿಗೆ ದಾನ ಮಾಡುವುದು ವಾಡಿಕೆ. ಇಂಥ ನೆಲಮೂಲ ಸಂಸ್ಕೃತಿಯನ್ನು ಮುಂದುವರಿಸುವ ನಿಟ್ಟಿನಲ್ಲಿ ವಿ. ನಾಗರಾಜ್ ಅವರಂಥ ಉದಾರಿಗಳು ಬಡವರಿಗೆ ಸಂಕ್ರಾಂತಿ ಕಿಟ್ ಹಂಚುತ್ತಿರುವುದು ಮತ್ತಷ್ಟು ಜನರಿಗೆ ಸ್ಫೂರ್ತಿಯಾಗಲಿ. ಒಟ್ಟಾರೆ ಬಡವರಿಗೆ ಅನುಕೂಲವಾಗಲಿ ಎಂದರು.

ಅಂದ್ರಹಳ್ಳಿ ಕಾಂಗ್ರೆಸ್ ಮುಖಂಡ ಹಾಗೂ ಜಿಬಿಎ ಚುನಾವಣಾ ಆಕಾಂಕ್ಷಿ ವಿ. ನಾಗರಾಜ್ ಮಾತನಾಡಿ ಶಾಸಕ ಎಸ್.ಟಿ ಸೋಮಶೇಖರ್ ಅವರು ಕ್ಷೇತ್ರದಾದ್ಯಂತ ಜನರಿಗೆ ಸಂಕ್ರಾಂತಿ ಕಿಟ್ ಗಳನ್ನು ಹಂಚುತ್ತಿದ್ದಾರೆ. ಅವರಿಂದ ಸ್ಫೂರ್ತಿ ಪಡೆದು ವಿವಿಧ ಜಿಲ್ಲೆಗಳ ರೈತರಿಂದ ನೇರವಾಗಿ ಕಬ್ಬು, ಗೆಣಸು, ಕಡಲೆಕಾಯಿ, ಅವರೆಕಾಯಿ ಖರೀದಿಸಿ ಜತೆಗೆ ಎಳ್ಳು ಬೆಲ್ಲ ಸೇರಿಸಿ ವಾರ್ಡ್‌ನ ಸುಮಾರು 5 ಸಾವಿರ ಮಂದಿಗೆ ಹಬ್ಬಕ್ಕೆ ಕಿಟ್ ಹಂಚಲಾಯಿತು ಎಂದರು.

ಅಂದ್ರಹಳ್ಳಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಮುನಿರಾಜು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶೃತಿಗೌಡ, ಯುವ ಘಟಕದ ಅಧ್ಯಕ್ಷ ಅರುಣ್ ಬೈಲಪ್ಪ, ಮುಖಂಡ ಶ್ರೀನಿವಾಸ್, ದೊಡ್ಡಬಿದರಕಲ್ಲು ವಾರ್ಡ್ ಅಧ್ಯಕ್ಷ ಲಿಖಿತ್ ಗೌಡ, ನಾಡಪ್ರಭು ಕೆಂಪೇಗೌಡನಗರ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಕುಮಾರ್, ಮುಖಂಡೆ ರಾಜೇಶ್ವರಿ, ಮೊದಲಾದವರಿದ್ದರು

## ಕಾಯಕ ಯೋಗಿ ಸಿದರಾಮೇಶರ ಜಯಂತಿ: ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿಶೇಷ ಕಾರ್ಯಕ್ರಮ



**ಬೆಂಗಳೂರು:** 12ನೇ ಶತಮಾನದ ಮಹಾನ್ ಶರಣರು, ವಚನಕಾರರು ಹಾಗೂ ಲಿಂಗಾಯತ ಧರ್ಮದ ಪ್ರಮುಖ ಯೋಗಿಗಳಾದ ಕಾಯಕ ಯೋಗಿ ಸಿದ್ದರಾಮೇಶ್ವರರ ಜಯಂತಿಯನ್ನು ನಗರದ ವಿವಿಧೆಡೆ ಭಕ್ತಿಭಾವದಿಂದ ಆಚರಿಸಲಾಯಿತು.

ಈ ಅಂಗವಾಗಿ ಬೆಂಗಳೂರಿನ ನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಭಾಗಿತ್ವದಲ್ಲಿ ವಿಶೇಷ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಮಾನ್ಯ ಜಿ. ಜಗದೀಶ, ಐ.ಎ.ಎಸ್. ಅವರು ಮಾತನಾಡಿ, "ಕಾಯಕವೇ ಕೈಲಾಸ" ಎಂಬ ಸಿದ್ದರಾಮೇಶ್ವರರ ತತ್ವ ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿದ್ದು, ಶ್ರಮ, ಶಿಸ್ತು ಮತ್ತು ಪ್ರಾಮಾಣಿಕತೆ ಮಾನವ ಬದುಕಿನ ಮೂಲ ಮೌಲ್ಯಗಳಾಗಿವೆ ಎಂದು ಹೇಳಿದರು. ಅವರ ಆದರ್ಶಗಳು ಯುವ ಪೀಳಿಗೆಗೆ ದಾರಿ ತೋರಿಸುವಂತಿವೆ ಎಂದರು.

ಈ ಸಂದರ್ಭದಲ್ಲಿ ಶ್ರೀ ಪರಮ ಪೂಜ್ಯ ಮ.ನಿ.ಪ್ರ. ಬಸವ ಶರಣ ಸಂಗಮೇಶ್ ಅವರು ಆಶೀರ್ವಚನ ನೀಡಿ ಮಾತನಾಡಿ, ಜಾತಿ-ಮತ ಭೇದವಿಲ್ಲದೆ ಸಮಾನತೆ ಹಾಗೂ ಮಾನವೀಯತೆಯನ್ನು ಸಾರಿದ ಸಿದ್ದರಾಮೇಶ್ವರರ ವಚನಗಳು ಸಮಾಜ ಸುಧಾರಣೆಗೆ ಮಹತ್ವದ ಕೊಡುಗೆಯಾಗಿವೆ ಎಂದು ಹೇಳಿದರು.

ಆನಂದ್ ಸಿ. ತಿರುಮಲ ಮಾತನಾಡಿ ಕಾಯಕ, ನೈತಿಕತೆ ಮತ್ತು ಸಮಾಜಸೇವೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಸಿದ್ದರಾಮೇಶ್ವರರ ತತ್ವಗಳು ಇಂದಿನ ಯುವ ಪೀಳಿಗೆಗೆ ಪ್ರೇರಣೆಯಾಗಿವೆ ಎಂದರು.

ವಕೀಲರಾದ ಜಗದೀಶ್ ಅವರು ಮಾತನಾಡಿ, ಕಾಯಕ ಯೋಗಿ ಸಿದ್ದರಾಮೇಶ್ವರರು ಶ್ರಮಜೀವಿಗಳ ಬದುಕಿಗೆ ಗೌರವ ತಂದ ಮಹಾನ್ ಯೋಗಿಯಾಗಿದ್ದು, ಅವರ ವಚನಗಳು ಅಂಧಶ್ರದ್ಧೆ ಮತ್ತು ವೈಷಮ್ಯಗಳ ವಿರುದ್ಧ ಹೋರಾಡುವ ಶಕ್ತಿಯನ್ನೇ ನೀಡಿವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಆರ್ ಚಂದ್ರಶೇಖರ್ ಎಡಿ ರವರು, ಸಮಾಜದ ನಾಯಕರಾದ ರಾಜ್ಯ ಯುವ ಬ್ರಿಗೇಡ್ ನ ಅಧ್ಯಕ್ಷ ಮುನಿ ಕುಮಾರ್, ರಾಜ್ಯ ಪ್ರಶಸ್ತಿ ವಿಜೇತ ಆನಂದ್ ಸಿ ತಿರುಮಲ,ನಾಗರಾಜ್,ಮುನಿ ನಾರಾಯಣ್, ವೆಂಕಟೇಶ್, ರಂಗನಾಥ್ ಎಲ್ ಪಾತ್ರೋಟಿ, ಸೇರಿದ್ದಂತೆ ವಿವಿಧ ಗಣ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ವೀರಶೈವ ಲಿಂಗಾಯತರನ್ನ ರಾಜಕೀಯ ಉದ್ದೇಶಕ್ಕಾಗಿ ಒಡೆಯವ ಉನ್ನಾರ ನಡೆಯಿತ್ತಿದೆ: ಬಿ.ವೈ ವಿಜಯೇಂದ್ರ



**ಚಿತ್ರದುರ್ಗ/ ಹೊಳಲ್ಕೆರೆ:** ವೀರಶೈವ ಲಿಂಗಾಯತ ಸಮಾಜವನ್ನು ರಾಜಕೀಯ ಉದ್ದೇಶಕ್ಕಾಗಿ ಒಡೆಯವ ಉನ್ನಾರ ನಡೆಯಿತ್ತಿದ್ದು ಇದನ್ನ ನಾವು ಸಹಿಸಲ್ಲ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದರು.

ಹೊಳಲ್ಕೆರೆ ಪಟ್ಟಣದ ವಾಲ್ಮೀಕಿ ಸಮುದಾಯ ಭವನದ ಮೈದಾನದಲ್ಲಿ ಬುಧವಾರ ನೊಳಂಬ ಲಿಂಗಾಯತ ಸಮಾಜ ಅಯೋಜಿಸಿರುವ ಲಙಙನೇ ಸಿದ್ದರಾಮೇಶ್ವರ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶ್ರೀ ಗುರುಸಿದ್ದರಾಮೇಶ್ವರರ ಹನ್ನೇರಡನೆ ಶತಮಾನದಲ್ಲಿ ಶರಣ ಸಂಸ್ಕೃತಿಗೊಳಗಾಗಿ ಸಮಾಜದಲ್ಲಿನ ಎಲ್ಲಾ ವರ್ಗದ ಪ್ರಗತಿಗೆ ಪೂರಕವಾದ ಜಲ ಸಂರಕ್ಷಣೆಯಂತಹ ಕಾರ್ಯಗಳಿಗೆ ಒತ್ತು ಕೊಟ್ಟು ಕೆರೆ ಕಟ್ಟೆಗಳನ್ನು ಕಟ್ಟಿ ಕೃಷಿ ಕ್ಷೇತ್ರಕ್ಕೆ ಅದ್ಯತೆ ನೀಡಿದ್ದರಿಂದ ಇಂದಿನ ಸರಕಾರಗಳು ಅವರ ಮಾದರಿಯಲ್ಲಿಯೇ ನೀರಾವರಿ ಯೋಜನೆಗಳನ್ನು ಮಾಡುತ್ತಿದ್ದಾರೆ. ಅದೇ ರೀತಿ ವಚನ ಸಾಹಿತ್ಯದ ಮೂಲಕ ಜನರಲ್ಲಿ ಜಾತ್ಯಾತಿತ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ್ದರು. ನೊಳಂಬ ಲಿಂಗಾಯತ ಸಮಾಜವು ಸಿದ್ದರಾಮೇಶ್ವರರ ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯಿತ್ತಿದ್ದು ಸಂಘಟನೆಯಲ್ಲಿ ರಾಜ್ಯದಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಅರ್ಥಿಕವಾಗಿ ಇನ್ನೂಷ್ಟು ಬಲಿಷ್ಠವಾಗಬೇಕು ಎಂದು ಹೇಳಿದರು.

ಸಮಾರಂಭ ಸಾನಿಧ್ಯ ವಹಿಸಿದ್ದ ಸಿರಿಗೆರೆ ತರಳಬಾಳು ಮಠದ ಡಾ. ಶಿವಾಚಾರ್ಯಸ್ವಾಮೀಜಿ ಮಾತನಾಡಿ ಭಾರತೀಯರಲ್ಲಿರುವ ಕಾಲೆಳೆಯುವ ಪ್ರವೃತ್ತಿಯಿಂದ ಹೊರ ಬಂದು ಸಮ ಸಮಾಜದ ನಿರ್ಮಾಣದತ್ತ ಚಿಂತನೆ ಮಾಡಿ ಸನ್ಮಾ ಮಾರ್ಗದಲ್ಲಿ ನಡೆಯ ಬೇಕೆಂದು ಹೇಳಿದರು.

ಸಮಾರಂಭದಲ್ಲಿ ಸಿದ್ದಗಂಗ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮೀಜಿ, ಕುಂಚಿಟಿಗ ಸಂಸ್ಥಾನದ ಶಾಂತವೀರಸ್ವಾಮೀಜಿ, ಭಗೀರಥ ಪೀಠದ ಪುರಷೋತ್ತಮಾನಂದ ಸ್ವಾಮೀಜಿ, ಕೆರೆಗೋಡಿ ರಾಮಗಾಪುರದ ಗುರು ಪರದೇಶಿಕೇಂದ್ರ ಸ್ವಾಮೀಜಿ, ಪುಷ್ಪಗಿರಿ ಸಂಸ್ಥಾನದ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ತಮ್ಮಡಿಹಳ್ಳಿ ಡಾ.ಅಭಿನವ ಮಲ್ಲಿಕಾರ್ಜನ ಸ್ವಾಮೀಜಿ, ಸಾನೀಧ್ಯ ವಹಿಸಿ ಮಾತನಾಡಿದರು.

ಮಾಜಿ ಸಚಿವ ಎಂ.ಪಿ. ರೇಣುಕಚಾರ್ಯ ನೊಳಂಬ ಲಿಂಗಾಯತ ಪುಸ್ತಕ ಬಿಡುಗಡೆ ಮಾತನಾಡಿ ಶಾಮನೂರು ಶಿವಶಮಕರಪ್ಪ ಲಿಂಗೈಕ್ಯರಾಗಿರುವುದರಿAದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ ಅಧ್ಯಕ್ಷ ಸ್ಥಾನಕ್ಕೆ ಸಮಾಜದ ಎಲ್ಲಾ ಧಾರ್ಮಿಕ ಗುರುಗಳು ಮಾಜಿ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪರನ್ನು ಅಯ್ಕೆ ಮಾಡಬೇಕು ಎಂದು ಸಮಾರಂಭದಲ್ಲಿ ಮನವಿ ಮಾಡಿದರು.

ಸಂಸದ ಗೋವಿಂದ ಕಾರಜೋಳ ನೊಳಂಬವಾಣಿ ಸಂಚಿಕೆ, ತುಮಕೂರು ಶಾಸಕ ಜ್ಯೋತಿ ಗಣೇಶ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದರು.

ನೊಳಂಬ ಸಮಾಜದ ಕೇಂದ್ರ ಸಮಿತಿ ಅಧ್ಯಕ್ಷ ಬಿ.ಕೆ. ಚಂದ್ರಶೇಖರ, ಕಾರ್ಯದರ್ಶಿ ಶಶಿದರ, ನಿವೃತ್ತ ಎಡಿಜಿಪಿ ಸಿದ್ದರಾಮಪ್ಪ, ನಿ,ಎಸಿಪಿ ಲೋಕೇಶ್ವರಪ್ಪ, ಶಾಸಕರಾದ ಎಂ.ಚಂದ್ರಪ್ಪ, ಎಚ್.ಕೆ.ಸುರೇಶ, ಮಾಜಿ ಶಾಸಕರಾದ ಕೆ.ಎಸ. ಲಿಂಗೇಶ, ಕೆ.ಸಿ.ರಮೇಶ, ಬಿಜೆಪಿ ವಕ್ತಾರ ಚಂದ್ರಶೇಖರ್, ಸ್ವಾಗತ ಸಮಿತಿ ಅಧ್ಯಕ್ಷ ಶಶಿದರ, ಬಿಜೆಪಿ ಮುಖಂಡರಾದ ವಸಂತ ಕುಮಾರ, ಲಿಂಗಮೂರ್ತಿ, ಇತರರು ಉಪಸ್ಥಿತರಿದ್ದರು.

ಶ್ರೀ ಸಿದ್ದರಾಮೇಶ್ವರ ಸ್ವಾಮಿಯ ಅಕರ್ಷಕ ಉತ್ಸವ: ಉತ್ಸವಕ್ಕೂ ಮುನ್ನ ಸಮಾರಂಭದ ವೇದಿಕೆಯ ಮುಂಬಾಗದಲ್ಲಿ ಕುಪ್ಪೂರು ವಿರಕ್ತ ಮಠದ ಡಾ.ಅಭಿನವ ಮಲ್ಲಿಕಾರ್ಜನ ದೇಶಿಕೇಂದ್ರ ಸ್ವಾಮೀಜಿ ಷಟ್ಟಸ್ಥಳ ಧ್ವಜರೋಹಣ ನರವೇರಿಸಿದರು.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣದಲ್ಲಿ ಬುಧವಾರ ನಡೆದ ಲಙಙನೇ ಶ್ರೀಸಿದ್ದರಾಮೇಶ್ವರರ ಜಯಂತೋತ್ಸವದ ಅಂಗವಾಗಿ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಶ್ರೀ ಸಿದ್ದರಾಮೇಶ್ವರಸ್ವಾಮಿ ದೇವರ ಉತ್ಸವ ವೈಭವದಿಂದ ನಡೆಯಿತು. ಪಟ್ಟಣದ ಸಿದ್ದರಾಮೇಶ್ವರ ದೇವಾಲಯದಿಂದ ಹೊರಟ ಉತ್ಸವ ಯಕ್ಷಗಾನ, ಬೊಂಬೆ ಕುಣಿತ, ನಾಸಿಕ ಡೋಲ್ ಜಗ್ಗಲಿಗೆ ಮೇಳ ಕಂಸಾಳೆ ಗೊರವರ ಕುಣಿತ, ವೀರಗಾಸೆ, ಕೋಲಾಟ, ನಂದಿ ಧ್ವಜ ಕುಣಿತ ಮುಂತಾದ ಕಲಾ ತಂಡಗಳು ಉತ್ಸವದಲ್ಲಿ ಭಾಗವಹಿಸಿದ್ದವು.

1108 ಪೂರ್ಣ ಕುಂಭ ಹೊತ್ತ ಮಹಿಳೆಯರು ಸಾಲು ಉತ್ಸವ ಅಕರ್ಷಣೆಯಾಗಿತ್ತು ಉತ್ಸವದಲ್ಲಿ ಭಾಗವಹಿಸಿದ್ದ ಸಾವಿರಾರು ಭಕ್ತರು ಬಾಗವಹಿಸಿದ ಮೆರವಣಿಗೆ ವಿಜೃಂಭನೆಯಿಂದ ಜರಗಿತು. ಮೆರವಣಿಗೆಯಲ್ಲಿ ಮೈಸೂರಿನ ಬಸವಮಂದಿರದ ಮಾತೆ ಬಸವಾಂಜಲಿ,ಮಾಜಿ ಶಾಸಕ ಉಮಾಪತಿ, ಪುರಸಭೆ ಉಪಾಧ್ಯಕ್ಷೆ ನಾಗರತ್ನವೇದಮೂರ್ತಿ, ನೊಳಂಬ ಸಮಾಜದ ಮುಖಂಡರಾದ,ಧನAಜಯ,ರಂಗೇಶ, ಮರಿದಿಮ್ಮಪ್ಪ, ಲೋಕೇಶ್ವರಪ್ಪ, ಪಾಲಾಕ್ಷಪ್ಪ ಕಬ್ಬಳ, ಶೆಟ್ಟಿಹಳ್ಳಿ ನಾಗಭೂಷಣ, ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿದ್ದರು.



## ನಾಳೆ ಗಣರಾಜ್ಯೋತ್ಸವ ಪೂರ್ವಭಾವಿ ಸಭೆ

**ನೆಲಮಂಗಲ:** 2026ರ ಜನವರಿ 26ರಂದು ನಡೆಯಲಿರುವ ಗಣರಾಜ್ಯೋತ್ಸವ ಆಚರಣೆಯ ಸಿದ್ಧತೆಗಳ ಕುರಿತು ಪೂರ್ವಭಾವಿ ಸಭೆಯನ್ನು ತಾಲ್ಲೂಕು ಆಡಳಿತ ಆಯೋಜಿಸಿದೆ.

ಜನವರಿ 16, 2026ರಂದು ಬೆಳಿಗ್ಗೆ 10.30ಕ್ಕೆ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸಭೆ ನಡೆಯಲಿದೆ. ಗಣರಾಜ್ಯೋತ್ಸವ ದಿನದ ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮಗಳು, ಭದ್ರತೆ, ಶಿಸ್ತು ಹಾಗೂ ಇತರೆ ವ್ಯವಸ್ಥೆಗಳ ಬಗ್ಗೆ ಚರ್ಚೆ ನಡೆಸಲಾಗುವುದು.

ಸಭೆಗೆ ವಿವಿಧ ಇಲಾಖೆ ಅಧಿಕಾರಿಗಳು, ತಾಲ್ಲೂಕು ಮಟ್ಟದ ಸಿಬ್ಬಂದಿ ಹಾಗೂ ಸಂಬಂಧಿಸಿದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕೆಂದು ತಿಳಿಸಲಾಗಿದೆ. ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಹಾಗೂ ಶಿಸ್ತುಬದ್ಧವಾಗಿ ಆಚರಿಸುವ ನಿಟ್ಟಿನಲ್ಲಿ ಎಲ್ಲರ ಸಹಕಾರವನ್ನು ಕೋರಲಾಗಿದೆ.

ಸುದ್ದಿ ಹಾಗೂ ಜಾಹೀರಾತುಗಾಳಿಗಾಗಿ ಸಂಪರ್ಕಿಸಿ
9538786812 / 8217606793
9480867498

## ದಿನ ಬೆಳಗೆದ್ರೆ ಹೋರಾಟ ಮಾಡ್ತಾ ಇದ್ರು, ನಾನು ಯೋಜನೆ ನಿಲ್ಲಿಸಿದೆ: ಶಾಸಕ ಎನ್.ಶ್ರೀನಿವಾಸ್

**ನೆಲಮಂಗಲ:** ಬಿಜೆಪಿ ಸರ್ಕಾರ ತಂದ ವೃಷಭಾವತಿ ಕೊಳಚೆ ನೀರಿನ ಯೋಜನೆಯನ್ನ ನಾನು ಮುಂದುವರೆಸುವುದಿಲ್ಲ, ಹಿಂದಿನ ಬಿಜೆಪಿ ಸರ್ಕಾರದಲ್ಲಿ ಮಾಜಿ ಶಾಸಕ ಶ್ರೀನಿವಾಸಮೂರ್ತಿ ಅವರು ಅಧಿಕಾರದಲ್ಲಿ ಇದ್ದಾಗ ಸಂಪುಟದಲ್ಲಿ ಅನುಮೋದನೆ ಆಗಿದ್ದ ಯೋಜನೆ. ಇದರಿಂದ ರೈತರಿಗೆ ಅನುಕೂಲ ಆಗಬಹುದು ಎಂದು ನಾನು ತಿಳಿದುಕೊಂಡು ಶ್ರೀನಿವಾಸ ಮೂರ್ತಿ ತಂದ ಯೋಜನೆಗೆ ತೊಂದರೆ ಕೊಡಬಾರದು ಎಂದು ನಾನು ಮುಂದುವರೆಸಿದೆ, ಆದ್ರೆ ಈಗ ನಾನಿರುವವರೆಗೆ ವೃಷಭಾವತಿ 2ನೇ ಹಂತದ ಸಂಸ್ಕರಿತ ನೀರು ಬಿಟ್ಟುಕೊಳ್ಳುವುದಿಲ್ಲ ಎಂದು ಶಾಸಕ ಎನ್ ಶ್ರೀನಿವಾಸ್ ತಿಳಿಸಿದರು.

ನೆಲಮಂಗಲ ನಗರದ ತಾಲೂಕು ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಸಿದ್ದರಾಮೇಶ್ವರ ಜಯಂತಿ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಎನ್. ಶ್ರೀನಿವಾಸ್ ಈ ಯೋಜನೆಯನ್ನ ಮಾಜಿ ಶಾಸಕರು ತಂದು ನನ್ನ ಮೇಲೆ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡಿಕೊಂಡು ಇದರಿಂದ ಗಂಬೀರ ಆರೋಗ್ಯ ಸಮಸ್ಯೆಗಳು ಬರುತ್ತೆ, ಮುಂದಿನ ಪೀಳಿಗೆಗೆ ತೊಂದರೆ ಆಗುತ್ತೆ ಅಂದ್ರು, ಅವರೇ ಮಾಡಿದ ಯೋಜನೆಯನ್ನ ನನ್ನ ಮೇಲೆ ರಾಜಕೀಯ ದುರುದ್ದೇಶದಿಂದ ಆರೋಪ ಮಾಡಲು ಯತ್ನಿಸಿದರು.

ವೃಷಭಾವತಿ ಹೋರಾಟವನ್ನೇ ದಿನ ಬೆಳಗ್ಗೆ ಆದ್ರೆ ಮಾಡ್ತಾ ಇದ್ರು, ಇದಕ್ಕೆ ನಾನ್ಯಾಕೆ ತಲೆ ಕೊಡಬೇಕು, ಈಗಾಗಿ ನಾನು ಎರಡನೇ ಹಂತದ ಶುದ್ಧೀಕರಣದ ನೀರು ಬೇಡ, ಮೂರನೇ ಹಂತದ್ದು ಕೊಟ್ರೆ ಕೋಡಿ, ಇಲ್ಲಾಂದ್ರೆ ಎತ್ತಿನಹೊಳೆ ಯೋಜನೆಯ ನೀರು ಕೋಡಿ ಇಂದು ಕೇಳಿದ್ದೇನೆ. ಮೊದಲು ಪೈಪ್ಲೈನ್ ಆಗಲಿ, ಅದಕ್ಕೆ ದುಡ್ಡು ಕೊಡುವುದಿಲ್ಲ, ಎತ್ತಿನಹೊಳೆ ಯೋಜನೆ ಶ್ರೀರಂಗ ಯೋಜನೆಯಿಂದ ನೀರು ತರೋಣ ಇಂದು ಮಾಧ್ಯಮಗಳಿಗೆ ತಿಳುಹಿಸಿದರು.

## ಅಧೀಕೃತ ಆದೇಶಪತ್ರ, ಪತ್ರ ವ್ಯವಹಾರ ಯಾವಾಗ ಸ್ವಾಮಿ?

ಶಾಸಕರು ಸದನದಲ್ಲಿ ಮಾತನಾಡಿದ್ದಕ್ಕೆ ತಾಲೂಕಿನ ಜನತೆ, ವೃಷಭಾವತಿ ಯೋಜನೆ ವಿರೋಧಿ ಹೋರಾಟ ಸಮಿತಿಯ ಸದಸ್ಯರು ಶಾಸಕರಿಗೆ ಅಭಿನಂದನೆ ಸಲ್ಲಿಸುವುದರ ಜೊತೆಗೆ ಮತ್ತೊಂದು ಪ್ರಶ್ನೆ ಉಲ್ಬಣಿಸಿ. ವೀರಾವೇಶದಿಂದ ಮಾತನಾಡಿ ಯೋಜನೆ ವಿರೋಧಿಸಿದ್ದು ಸರಿ ಆದರೆ ಈ ಯೋಜನೆಯ ಬಗ್ಗೆ ಅಧಿಕೃತ ಆದೇಶ ಪತ್ರ ಪಡೆಯಲು ಯಾಕಿಷ್ಟು ತಡ ಆಗ್ತಾ ಇದೇ ಶಾಸಕರೇ? ವಿವಿಧ ಸಂಸ್ಥೆಗಳ ನೇಮಕಾತಿಗೆ ಸರ್ಕಾರದ ಹಿಂದೆ ಬಿದ್ದು ಮಾಡಿಸಿಕೊಂಡು ಬರುವ ನೀವು ಈ ವಿಚಾರದಲ್ಲಿ ಹಿಂದೆ ಸರಿಸಿರುವುದು ಏಕೆ? ಸರ್ಕಾರದಿಂದ ಒಂದು ಅಧಿಕೃತ ಜ್ಞಾಪನ ಪತ್ರ ಹೊರಡಿಸಿ, ಬಳಿಕ ತಾಲೂಕಿನಲ್ಲಿ ಸಂಭ್ರಮ ಆಚರಣೆಯನ್ನು ಎಲ್ಲರೂ ಸರಿ ಒಟ್ಟಿಗೆ ಮಾಡೋಣ.

ಸರ್ಕಾರಕ್ಕೆ ಪತ್ರ ಬರೆಯಿರಿ ಇಂದು ಮಾನ್ಯ ಸಭಾಪತಿಗಳೇ ತಮಗೆ ಮಾರ್ಗದರ್ಶನ ನೀಡಿದ್ದಾರೆ. ಆದರೂ ಈವರೆಗೂ ಪತ್ರ ವ್ಯವಹಾರ ಮಾಡಿಲ್ಲ? ಒಂದು ವೇಳೆ ಪತ್ರ ವ್ಯವಹಾರ ಮಾಡಿದ್ದರು ಇನ್ನೂ ಏಕೆ ನಿಮ್ಮ ಬೆಂಬಲಿಗರು ಆ ಪತ್ರವನ್ನ ನೀವೇ ಹೇಳುವ ಸೋಶಿಯಲ್ ಮೀಡಿಯಾದಲ್ಲಿ ಹಾಕಿ ಮೈಲೇಜ್ ತಗೊಳ್ತಾ ಇಲ್ಲಾ? ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನೋಡುದ್ರೆ ಬೇರೆ ಕೆಲಸಗಳಿಗೆ ಸರ್ಕಾರದ ಬೆನ್ನು ಬೀಳೋ ನೀವು ಈ ವಿಚಾರದಲ್ಲಿ ಯಾಕೆ ಕೇವಲ ಸೋಶಿಯಲ್ ಮೀಡಿಯಾ ಸ್ಟಾರ್ ಆಗಿದ್ದೀರಾ? ಈ ಕ್ಷೇತ್ರದ ಜನತೆಯ ಪರವಾಗಿ ಕೇಳುತ್ತಿರುವುದು ದಯವಿಟ್ಟು ಸರ್ಕಾರದ ವತಿಯಿಂದ ಅಧಿಕೃತ ಪತ್ರ ಹೊರಡಿಸಿ ನಮ್ಮ ಕ್ಷೇತ್ರದ ಜನರನ್ನ ಉಳಿಸಿ ಎಂದು ವೃಷಭಾವತಿ ಹೋರಾಟಗಾರರು ಪ್ರಶ್ನೆ ಎತ್ತಿದ್ದಾರೆ.

## ಬಾರದ ಯೋಜನೆಗೆ ಪೈಪ್ಲೈನ್ ಯಾಕೆ!?

ಈಗ ಪೈಪ್ಲೈನ್ ಆಗಲಿ ಮುಂದೆ ಯಾವುದಾದರೂ ಒಂದು ಯೋಜನೆಯ ನೀರು ತರೋಣ ಎನ್ನುವ ಶಾಸಕರೇ ನಿಮಗೆ ಚೆನ್ನಾಗಿ ಗೊತ್ತಿರಲಿ ನೀರಾವರಿ ಯೋಜನೆಗಳು ಆರಂಭವಾಗುವ ಮೊದಲು ಗುರುತ್ವಾಕರ್ಷಣೆ ಹಾಗೂ ನೀರಿನ ಹರಿವಿನ ಹಾದಿಯ ಬಗ್ಗೆ ಮಾಹಿತ ಸಂಗ್ರಹಿಸಲಾಗುತ್ತದೆ. ಬಳಿಕ ಎಲ್ಲಿ ಪಂಪಿಂಗ್ ಸ್ಟೇಷನ್ ಮಾಡಬೇಕು, ಎಲ್ಲಿ ಸ್ಟೋರೇಜ್ ಮಾಡಬೇಕು ಎನ್ನುವುದು ಮುಖ್ಯವಾಗುತ್ತದೆ, ಮೂಲತಃ ಗುತ್ತಿಗೆದಾರರಾಗಿರುವ ತಮಗೆ ಈ ವಿಷಯದ ಬಗ್ಗೆ ಸಾಕಷ್ಟು ಜ್ಞಾನ ಇರಬಹುದು ಎನ್ನುವುದುದ ನನ್ನ ಅನಿಸಿಕೆ.

ಆದರೆ ಈಗ ಪೈಪ್ಲೈನ್ ಆಗಲಿ ಆಮೇಲೆ ನೋಡಿಕೊಳ್ಳೋಣ ಎನ್ನುವುದು ಉಡಾಪೆ ಉತ್ತರವಾಗುತ್ತದೆ. ಉದಾಹರಣೆಗೆ ಸದ್ಯ ನೆಲಮಂಗಲದಿಂದ ದಾಬಸ್ಪೇಟೆಗೆ ಹರಿಯಲಿರುವ ನೀರು ಪಂಪಿಂಗ್ ಆಗಲಿದೆ, ಅಂದರೆ ನೆಲಮಂಗಲಕ್ಕಿಂತ ದಾಬಸ್ಪೇಟೆ ಭೂ ಪ್ರದೇಶ ಎತ್ತರದಲ್ಲಿ ಇರಬಹುದು. ಒಂದು ವೇಳೆ ತುಮಕೂರಿನಿಂದ ಹೇಮಾವತಿ ನೀರು ತಂದರೆ ಮೊದಲು ನೆಲಮಂಗಲಕ್ಕೆ ಹರಿಸಿ ಆಮೇಲೆ ಪಂಪ್ ಮಾಡುತ್ತಿರೋ ಇಲ್ಲ ದಾಬಸ್ಪೇಟೆ ಮುಖಾಂತರ ಗ್ರಾವಿಟಿಯಲ್ಲಿ ಹರಿಸುತ್ತೀರೋ...??? ಈಗಾಗಿ ಪೈಪ್ಲೈನ್ ಕಾಮಗಾರಿಯನ್ನ ಕೂಡಲೇ ನಿಲ್ಲಿಸಿ, ಜನರ ತೆರಿಗೆ ಹಣವನ್ನ ಉಳಿಸಿ.



**ಅಭಿಷೇಕ್ ಡಿ.ಆರ್.**
**ಸಂಪಾದಕರು**

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

## ಇಂದು ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ, ಅದ್ದೂರಿ ಕಡಲೆಕಾಯಿ ಪರಿಷೆ



**ಯಶವಂತಪುರ** : ಕೆಂಗೇರಿ ಸಮೀಪದ ಸೋಂಪುರದ ಚೋಳರ ಕಾಲದ ಇತಿಹಾಸ ಪ್ರಸಿದ್ಧ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ ಆವರಣದಲ್ಲಿ ಇಂದು ಜ.15 ರಂದು ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ಹಾಗೂ ವಿಜೃಂಭಣೆಯ ಕಡಲೆಕಾಯಿ ಪರಿಷೆಗೆ ಶ್ರೀ ಬಸವಣ್ಣ ದೇವರ ಸೇವಾ ಸಮಿತಿ ವತಿಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಹಾಗೂ ಜಾತ್ರೆ ಉಸ್ತುವಾರಿ ಎಂ. ರುದ್ರೇಶ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

2006ರಲ್ಲಿ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ ಜೀರ್ಣೋದ್ಧಾರಗೊಂಡ ಬಳಿಕ ಸಂಕ್ರಾಂತಿ ಹಬ್ಬದಂದು ಕಳೆದ 19 ವರ್ಷಗಳಿಂದ ನಿರಂತರವಾಗಿ ಜಾತ್ರೋತ್ಸವಹಮ್ಮಿಕೊಳ್ಳಲಾಗುತ್ತಿದೆ.

ಪ್ರತಿ ವರ್ಷವೂ ಬಸವೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗುತ್ತಿದೆ. ಅಂತೆಯೇ ಸಮಾಜದ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಸನ್ಮಾನಿಸಿ ಉಡುಗೊರೆ ನೀಡಲಾಗುತ್ತಿದೆ.

ಈ ಬಾರಿ ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ ಗುರುವಾರ ಬೆಳಿಗ್ಗೆ 11.45ಕ್ಕೆ ಚಾಲನೆ ಸಿಗಲಿದ್ದು ಜಾತ್ರೆಗೆ ಸುಮಾರು 2 ಲಕ್ಷ ಭಕ್ತರು ಸೇರುವ ನಿರೀಕ್ಷೆ ಇದೆ. ಮಧ್ಯಾಹ್ನ 2.50ಕ್ಕೆ ದೇವಸ್ಥಾನಗಳಲ್ಲಿ ಪೂಜೆ ಮಾಡುವ ಹಾಗೂ ಧಾರ್ಮಿಕ ಕೈಂಕರ್ಯಗಳಲ್ಲಿ ತೊಡಗಿರುವ ಅರ್ಚಕ ದಂಪತಿಗಳನ್ನು ಸನ್ಮಾನಿಸಿ ಗೌರವಿಸಿ ಉಡುಗೊರೆ ನೀಡುವುದು ಈ ಬಾರಿಯ ಜಾತ್ರೆಯ ವಿಶೇಷವಾಗಿದೆ ಜತೆಗೆ ವೇದಿಕೆಯಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳು ಇರಲಿವೆ ಎಂದರು.

ಭಕ್ತರಿಗೆ ಬೆಳಗ್ಗೆ 7ರಿಂದ ರಾತ್ರಿ 11 ಗಂಟೆವರೆಗೆ ಅನ್ನದಾಸೋಹ ನಡೆಯಲಿದೆ. ಜತೆಗೆ ಗಿಣ್ಣು ಪ್ರಸಾದ ವಿನಿಯೋಗವಿರಲಿದೆ. ತುಮಕೂರು ರಸ್ತೆ, ಮಾಗಡಿ ರಸ್ತೆ, ಕೆಂಗೇರಿ, ಕುಂಬಳಗೂಡು ಬನಶಂಕರಿ, ಬೆಂಗಳೂರು, ರಾಮನಗರ ಭಾಗಗಳಿಂದ ಬಿಎಂಟಿಸಿ ಬಸ್ ವ್ಯವಸ್ಥೆ ಇದೆ. ನೈಸ್ ರಸ್ತೆಯಲ್ಲಿ ಅಂದು ಟೋಲ್ ಫ್ರೀ ವ್ಯವಸ್ಥೆ ಇರಲಿದೆ ಎಂದರು.

ಜಾತ್ರಾ ಮಹೋತ್ಸವದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವರಾದ ಎಚ್.ಡಿ ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಸಂಸದ ರಾಘವೇಂದ್ರ,
ನಟ ದುನಿಯಾ ವಿಜಯ್, ನೈಸ್ ಸಂಸ್ಥೆ ಮುಖ್ಯಸ್ಥ ಅಶೋಕ್ ಖೇಣಿ, ವಿಧಾನಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ, ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ ಎಂದರು

ಎಂಎಲ್‌ಸಿ ಟಿ.ಎನ್ ಜವರಾಯಿಗೌಡ ಮಾತನಾಡಿ ನಗರೀಕರಣದ ಭರಾಟೆ ಯಲ್ಲಿ ಮರೆಯಾಗುತ್ತಿರುವ ಗ್ರಾಮೀಣ ಸೊಗಡಿನ ಸುಗ್ಗಿ ಸಡಗರವನ್ನು ಉಳಿಸಿ ಬೆಳೆಸಿ ನಗರ ವಾಸಿಗಳಿಗೆ ಪರಿಚಯಿಸಲು ಸಂಕ್ರಾಂತಿ ಆಚರಿಸುತ್ತಿರುವುದು ಶ್ಲಾಘ ನೀಯ ಕಾರ್ಯ ಎಂದರು. ಮಾಜಿ ಪಾಲಿಕೆ ಸದಸ್ಯ ರ.ಅಂಜಿನಪ್ಪ , ಗ್ರಾಪಂ ಸದಸ್ಯ ಮೋಹನ್ ಕುಮಾರ್, ಮುಖಂಡರಾದ ಸಿ.ಎಂ ಮಾರೇಗೌಡ, ಶಶಿಕುಮಾರ್, ನಾಗರಾಜ್, ರಮೇಶ್, ಸೇವಾ ಸಮಿತಿ ಸದಸ್ಯರು ಇದ್ದರು.



ಪೀಣ್ಯ ದಾಸರಹಳ್ಳಿ ಸಮೀಪದ ಭುವನೇಶ್ವರಿ ನಗರದ ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆ, ಅಕ್ಕಮಹಾದೇವಿ ಮಹಿಳಾ ಸಂಘ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದಾಸರಹಳ್ಳಿ ಕ್ಷೇತ್ರ ಘಟಕದ ವತಿಯಿಂದ ಕಾಯಕಯೋಗಿ ಸಹಕಾರ ಸಂಘದ ಕಚೇರಿಯಲ್ಲಿ ಶ್ರೀ ಸಿದ್ಧರಾಮೇಶ್ವರ ಸ್ವಾಮಿಯ ಜಯಂತಿ ಆಚರಿಸಲಾಯಿತು. ಸಂಘದ ಅಧ್ಯಕ್ಷ ಬಸವರಾಜಣ್ಣ , ಉಪಾಧ್ಯಕ್ಷ ಬಿ.ಟಿ. ಸುರೇಶ್, ಉಪನ್ಯಾಸಕಿ ಸುಜಾತ ಮೇಲೇಗೌಡ, ಕನ್ನಡ ಜಾನಪದ ಪರಿಷತ್ ದಾಸರಹಳ್ಳಿ ಘಟಕದ ಅಧ್ಯಕ್ಷ ವೈ.ಬಿ.ಎಚ್. ಜಯದೇವ್, ಎಂ.ಕೆ. ಜಗದೀಶ್, ಸಿದ್ದಲಿಂಗಪ್ಪ , ವೀರಶೈವ ಮುಖಂಡರಾದ ಎಂ. ಬಸವರಾಜು, ಮಂಜಣ್ಣ , ಪ್ರಕಾಶ್, ಶಿವರುದ್ರಯ್ಯ, ಆರಾಧ್ಯ, ಮೇಲೇಗೌಡ ಮುಂತಾದವರಿದ್ದರು

## ಸಾಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಶಿಕ್ಷಕರು, ಪತ್ರಕರ್ತರ ಪಾತ್ರ ನಿರ್ಣಾಯಕ: ಆರ್.ಟಿ. ಓ ಮಲ್ಲಿಕಾರ್ಜುನ್



**ಕೃಷ್ಣರಾಜಪೇಟೆ**: ಜಾಗತಿಕ ಜಗತ್ತಿನ ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ದಿನದಿಂದ ದಿನಕ್ಕೆ ಬದಲಾಗುತ್ತಿರುವ ಕಾಲಘಟ್ಟದಲ್ಲಿ ಸವಾಲುಗಳನ್ನು ಎದುರಿಸಿ ಸಾಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಶಿಕ್ಷಕರು ಮತ್ತು ಪತ್ರಕರ್ತರ ಪಾತ್ರವು ನಿರ್ಣಾಯಕವಾಗಿದೆ ಎಂದು ಸಮಾಜ ಸೇವಕರಾದ ಆರ್.ಟಿ. ಓ ಮಲ್ಲಿಕಾರ್ಜುನ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ನೀಡುವ ರಾಜ್ಯ ಪ್ರಶಸ್ತಿಗೆ ಕೆ.ಆರ್.ಪೇಟೆ ತಾಲೂಕಿನ ಹಿರಿಯ ಪತ್ರಕರ್ತ ಕೆ.ಆರ್.ನೀಲಕಂಠ ಭಾಜನರಾದ ಹಿನ್ನೆಲೆಯಲ್ಲಿ ಅಭಿನಂದಿಸಿ ಗೌರವಿಸಿ ಮಾತನಾಡಿದರು.

ಕೃಷ್ಣರಾಜಪೇಟೆ ಪಟ್ಟಣದ ಜಯನಗರ ಬಡಾವಣೆಯಲ್ಲಿ ಇರುವ ಶ್ರೀ ಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಿರಿಯ ಪತ್ರಕರ್ತರಾದ ಕೆ.ಆರ್. ನೀಲಕಂಠ ಹಾಗೂ ಕಳೆದ 14 ವರ್ಷಗಳಿಂದ ಉತ್ತಮ ಫಲಿತಾಂಶ ನೀಡುತ್ತಿರುವ ಗವಿಮಠ ಮುರಾರ್ಜಿ ವಸತಿ ಶಾಲಾ ಕುಪ್ಪಹಳ್ಳಿ ಪ್ರಸನ್ನ ಅವರನ್ನ ಅಭಿನಂದಿಸಿ ಮಾತನಾಡಿದರು. ಸಮಾಜ ಸುಧಾರಣೆಯಲ್ಲಿ ಪತ್ರಕರ್ತರ ಪಾತ್ರವು ಮಹತ್ವದ್ದಾಗಿದೆ. ಜನರು ತಮ್ಮ ಮೇಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪತ್ರಕರ್ತರು ಸಮಾಜಮುಖಿಯಾಗಿ ಆಲೋಚಿಸಿ ಕೆಲಸ ಮಾಡಬೇಕು. ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ವರದಿಗಳನ್ನು ಮಾಡಿ ಬದ್ಧತೆಯಿಂದ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಇಂತಹ ಗೌರವಾನ್ವಿತ ಉನ್ನತವಾದ ಪ್ರಶಸ್ತಿಗಳು ಲಭಿಸಲು ಸಾಧ್ಯವಿದೆ. ಹಿರಿಯ ಪತ್ರಕರ್ತರಾದ ಕೆ.ಆರ್. ನೀಲಕಂಠ ಅವರು 30 ವರ್ಷದ ತಮ್ಮ ಸುದೀರ್ಘ ಪತ್ರಿಕಾ ಜೀವನದಲ್ಲಿ ಹಲವು ಗೆಲುವು ಮತ್ತು ಸೋಲುಗಳನ್ನು ಅನುಭವಿಸಿದ್ದಾರೆ. ತಮಗೆ ಎಷ್ಟೇ ಹಿರಿತನವನ್ನು ಮರೆತು ಹಿರಿಯ ಪತ್ರಕರ್ತರಿಗೆ ಮಾರ್ಗದರ್ಶನ ತೋರುತ್ತ ಅವರ ಜೊತೆಯಲ್ಲೇ ಉಳಿದ ಹಿರಿಯ ಪತ್ರಕರ್ತರು ಕೂಡ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರು ಇಂದಿಗೂ ನಮ್ಮ ನಡುವೆ ಇದ್ದಾರೆ. ಪತ್ರಕರ್ತರ ಪರಿಸ್ಥಿತಿ ಕಠಿಣವಾಗಿದ್ದರೂ ಪ್ರಾಮಾಣಿಕವಾಗಿ ವರದಿಗಾರಿಕೆ ಮಾಡುತ್ತಿದ್ದಾರೆ.

ರಾಜ್ಯ ಸರ್ಕಾರವು ಪತ್ರಕರ್ತರ ಹಿತವನ್ನು ಗಮನದಲ್ಲಿಸಿಕೊಂಡು ಅವರಿಗಾಗಿಯೇ ಅನೇಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಅನೇಕ ಪತ್ರಕರ್ತರಿಗೆ ವೃತ್ತಿ ಬುನಾದಿಯನ್ನು ನೀಡಿವೆ ಎಂದ ಅವರು ಉತ್ತಮ ಸಮಾಜ ಹಾಗೂ ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ಶಿಕ್ಷಕರಿಗೆ ಸಮಾಜದಲ್ಲಿ ಬಹಳ ಗೌರವದ ಸ್ಥಾನವಿದ್ದು, ಶಿಕ್ಷಕರು ನಿರ್ವಹಿಸುವ ಕಾರ್ಯ ಅನನ್ಯವಾಗಿದೆ ಅ ನಿಟ್ಟಿನಲ್ಲಿ ಪ್ರಾಂಶುಪಾಲ ಪ್ರಸನ್ನ ಅವರು ಕೂಡ ಪ್ರಥಮ ಸ್ಥಾನದಲ್ಲಿ ಇದ್ದಾರೆ ಹಾಗಾಗಿ ಇವರಿಬ್ಬರಿಗೂ ಸ್ವಾಮಿ ವಿವೇಕಾನಂದ ಜಯಂತಿ ದಿನದೊಂದು ಗೌರವಿಸುವ ಕರ್ತವ್ಯ ನಮ್ಮದಾಗಿದೆ ಎಂದು ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ತಿಳಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ:ಕೆ.ಆರ್ ನೀಲಕಂಠ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ವರದಿಗಾರರ ಸಂಘದ ರಾಜ್ಯಾಧ್ಯಕ್ಷ ಸ್ಥಾನ ಸೇರಿದಂತೆ ವಿವಿಧ ಹುದ್ದೆಗಳನ್ನು ವಹಿಸಿಕೊಂಡು, ಸಂಘಟನಾತ್ಮಕ ಕಾರ್ಯಗಳನ್ನು ವಿವಿಧ ಸವಾಲುಗಳ ಮಧ್ಯೆ ಹತ್ತಾರು ವರ್ಷಗಳ ಕಾಲ ನಿರ್ವಹಿಸಿರುವುದು ತೃಪ್ತಿ ಕೊಟ್ಟಿದೆ. ಮಾಧ್ಯಮ ಅಕಾಡೆಮಿಯ ಪ್ರಶಸ್ತಿ ಸಿಗಲು ನಮ್ಮ ಹಿರಿಯ ಪತ್ರಕರ್ತರು ಕಾರಣರಾಗಿದ್ದಾರೆ. ನನ್ನ ಸೇವೆಯನ್ನು ಗುರುತಿಸಿ ಕರ್ನಾಟಕ ಮಾಧ್ಯಮ ಅಕಾಡೆಮಿ ನೀಡುವ ರಾಜ್ಯ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿ ಸೇರಿದಂತೆ ಸರ್ಕಾರದ ವಿವಿಧ ಉನ್ನತ ಸ್ಥಾನಮಾನಗಳು ತನ್ನನ್ನು ಹುಡುಕಿಕೊಂಡು ಬಂದಿವೆ ಎಂದರು.

ಭಾರತ ದೇಶದ ಆಧ್ಯಾತ್ಮಿಕತೆಯ ಮೇರು ಪರ್ವತವಾದ ವೀರಸನ್ಯಾಸಿ ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಮಹನೀಯರಾದ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.ಬಳಿಕ ತೇಗನಹಳ್ಳಿ ಗ್ರಾಮದಲ್ಲಿ ಶ್ರೀ ಧರ್ಮಸ್ಥಳ ಸಂಸ್ಥೆ ಏರ್ಪಡಿಸಿದ್ದ ಉಚಿತ ಕಣ್ಣಿನ ಶಿಬಿರದಲ್ಲಿ ಪಾಲ್ಗೊಂಡು ಶಾಸ್ತ್ರಚಿಕಿತ್ಸೆಗೆ ಪಡೆದುಕೊಂಡ ರೋಗಿಗಳಿಗೆ ಶ್ರೀ ಮಲ್ಲಿಕಾರ್ಜುನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಉಚಿತ ಕನ್ನಡಕ ವಿತರಿಸಿ ಕಿಕ್ಕೇರಿ ಕುರುಹೀನ ಸಮುದಾಯ ಭವನಕ್ಕೆ 50.ರೂ ಸಾವಿರ ಚೆಕ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಡಾ.ಕಾಳೇಗೌಡ, ಕಸಾಪ ಕೆ.ಆರ್. ಪೇಟೆ ತಾಲ್ಲೂಕು ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಚನ್ನರಾಯ ಪಟ್ಟಣ ಜಿಲ್ಲಾ ನಿರ್ದೇಶಕ ಡಾ. ಯೋಗೇಶ್, ಜನ ಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷೆ ನಳಿನಿ, ನಿರ್ದೇಶಕರಾದ ಕೆ.ಆರ್ ರಾಜೇಶ್, ಸುನಿತಾ, ಪದ್ಮಾ , ಮೊಟ್ಟೆ ಮಂಜುನಾಥ್, ಶಿವರಾಜ್, ಡಿ.ಸಿ ಕುಮಾರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಸುಜೇಂದ್ರ ಕುಮಾರ್, ಉದ್ಯಮಿ ಗ್ಯಾಸ್ ರಾಜಶೇಖರ್, ಹಿರಿಯ ಪತ್ರಕರ್ತರಾದ ಬಳ್ಳೇಕೆರೆ ಮಂಜುನಾಥ್, ಕಸಾಪ ಮಾಜಿ ಅಧ್ಯಕ್ಷ ಹರಿಚರಣ್ ತಿಲಕ್, ಕೃಷ್ಣರಾಜಪೇಟೆ ಕಾರ್ಯನಿರತ ಪತ್ರಕರ್ತ ಸಂಘದ ತಾಲ್ಲೂಕು ಅಧ್ಯಕ್ಷ ಅರುಣ್ ಕುಮಾರ್, ಆರ್.ಎಸ್.ಎಸ್ ಮಂಜುನಾಥ್,ಪ್ರಾಂಶುಪಾಲ ಪ್ರಸನ್ನ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾ ಅಧಿಕಾರಿಗಳಾದ ತಿಲಕ್ ರಾಜ್, ಕಿಕ್ಕೇರಿ ಪ್ರಸಾದ್, ವಿಶ್ರಾಂತ ಪೊಲೀಸ್ ಅಧಿಕಾರಿ ಶಂಕರಲಿಂಗೇಗೌಡ, ಮುಖಂಡರಾದ ಕೋಮನಹಳ್ಳಿ ಮಂಜುನಾಥ್, ಸಾಧುಗೋನಹಳ್ಳಿ ಕೋಳಿ ಮಂಜು, ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಅವರ ಆಪ್ತ ಸಹಾಯಕ ಗಂಜಿಗೆರೆ ಮಹೇಶ್, ಧರ್ಮಸ್ಥಳ ಸಂಸ್ಥೆಯ ಮೇಲ್ವಿಚಾರಕಿ ಗುಣಶ್ರೀ, ಸೇವಾಪ್ರತಿನಿಧಿ ಸೇರಿದಂತೆ ಉಪಸ್ಥಿತರಿದ್ದರು.

## ಸಿದ್ದರಾಮೇಶ್ವರ ಜಯಂತಿಯನ್ನ ಕೇವಲ ಪೂಜೆ ಮೆರವಣಿಗೆಗೆ ಸೀಮಿತಗೊಳಿಸದಿರಿ: ಎನ್.ಶ್ರೀನಿವಾಸ್

## ಈ ಹಿಂದಿನ ಶಾಸಕರು ಭೋವಿ ಸಮಾಜದ ಅರ್ಜಿಗಳೆಂದರೆ ಪಕ್ಕಕ್ಕಿಡುತಿದ್ದರು: ಮಾ. ಶಾಸಕ ಶ್ರೀನಿವಾಸಮೂರ್ತಿ ವಿರುದ್ಧ ಮಾ. ಶಾಸಕ ಎಂ.ವಿ ನಾಗರಾಜು ಆರೋಪ



**ನೆಲಮಂಗಲ:** ನಾಡಿನ ದಾರ್ಶನಿಕರ ಜಯಂತಿ ಕಾರ್ಯಕ್ರಮಗಳು ಪೂಜೆಗಷ್ಟೇ ಸೀಮಿತವಾಗದೇ ಸಮುದಾಯಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳಾಗಬೇಕು ಎಂದು ಕ್ಷೇತ್ರದ ಶಾಸಕ ಎನ್.ಶ್ರೀನಿವಾಸ್ ಕರೆನೀಡಿದರು.

ನಗರದಲ್ಲಿರುವ ತಾಲೂಕು ಕಚೇರಿ ಆಚರಣದಲ್ಲಿ ತಾಲೂಕು ಆಡಳಿತ ದವತಿಯಿಂದ ಹಮ್ಮಿಕೊಂಡಿದ್ದ ಕಾಯಕಯೋಗಿ ಶ್ರೀಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಚನಕಾರರಾದ ಶ್ರೀಸಿದ್ದರಾ ಮೇಶ್ವರರು ಭೋವಿ ಸಮಾಜಕ್ಕಷ್ಟೇ ಸೀಮಿತವಾಗದೆ ಎಲ್ಲಾ ಸಮಾಜಗಳು ಒಗ್ಗೂಡಿ ನಾಡಿನಲ್ಲಿ ಸಮಸಮಾಜ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದವರು, ಅವರ ಜಯಂತಿಯನ್ನು ಕೇವಲ ಪೂಜೆ ಮೆರವಣಿಗೆ ಸೇರಿದಂತೆ ವಿಜೃಂಭಣೆಯ ಆಚರಣೆಗೆ ಸೀಮಿತಗೊಳಿಸದೆ ಅವರ ತತ್ವ ಸಿದ್ಧಾಂತಗಳ ಅನುಕರಣೆಯೊಂದಿಗೆ ಆಚರಿಸಿದಾಗಮಾತ್ರ ಸಮಾಜ ಬಲಗೊಳ್ಳುತ್ತದೆ, ಸಮಾಜದಲ್ಲಿ ತುಳಿತಕ್ಕೊಳಗಾದ ಸಮಾಜಗಳು ಶೈಕ್ಷಣಿಕವಾಗಿ ಸಾಮಾಜಿಕವಾಗಿ ಆರ್ಥಿಕವಾಗಿ ಬಲಗೊಂಡು ಸಮಾನತೆಯನ್ನು ಕಾಯ್ದುಕೊಳ್ಳಬೇಕೆಂದು ಎಲ್ಲಾ ದಾರ್ಶನಿಕರ ಅಭಿಪ್ರಾಯವಾಗಿದೆ. ಸಮಾಜದ ಬಂಧುಗಳು ಹಾಗೂ ಮಾಜಿಶಾಸಕ ಎಂ.ವಿ.ನಾಗರಾಜ್ ಅವರ ಆಶಯದಂತೆ ತಾಲೂಕಿನಲ್ಲಿ ಒಂದು ಎಕರೆ ಜಮೀನನ್ನು ಸಮಾಜಕ್ಕೆ ಮಂಜೂರು ಮಾಡಿಕೊಡುವುದಾಗಿ ಭರವಸೆ ನೀಡದರು. ಸರ್ಕಾರದ ಎಲ್ಲಾ ಯೋಜನೆಗಳನ್ನು ಕ್ಷೇತ್ರದ ಜನತೆಯ ಮನೆಯ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತೇನೆಂದು ಭರವಸೆ ನೀಡಿದರು.

ಬಿಜೆಪಿ ಮಾಜಿಶಾಸಕ ಎಂ.ವಿ.ನಾಗರಾಜ್ ಭೋವಿ ಸಮಾಜದ ಅತ್ಯಂತ ಪ್ರಾಮಾಣಿಕತೆ ಹಾಗೂ ನಿಷ್ಟೆಯನ್ನು ಹೊಂದಿರುವಂತಹ ಸಮಾಜವಾಗಿದೆ, ಕರ್ಮಕಾಯಕದ ಮೂಲಕ 12ನೇ ಶತಮಾನದಲ್ಲಿಯೇ ಸಿದ್ದರಾಮೇಶ್ವರರು ದಾಸೋಹ ಸಂಸ್ಕೃಂತಿಯನ್ನು ಪ್ರಾರಂಭಿಸಿದ್ದವರು ಅವರನ್ನೆ ಹಿಂಬಾಲಿಸಿರುವ ರಾಜ್ಯದ ಪ್ರತಿಷ್ಟಿತ ಮಠಗಳು ಇಂದು ತ್ರಿವಿಧ ದಾಸೋಹವನ್ನು ನಡೆಸಿಕೊಂಡು ಬರುತ್ತಿರುವುದು ಸಮಾಜದ ಹೆಗ್ಗಳಿಕೆಯಾಗಿದೆ, ನಮ್ಮ ಸಮುದಾಯದ ಅಭಿವೃದ್ಧಿ ಹಾಗೂ ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಳ್ಳಲು ಕ್ಷೇತ್ರದ ಶಾಸಕರು 2ಎಕರೆ ಜಮೀನನ್ನು ಮಂಜೂರುಮಾಡಿಸಿಕೊಡಬೇಕು ಅದೇರೀತಿಯಾಗಿ ಎಲ್ಲಾ ಸಮುದಾಯಕ್ಕೂ ಸಹ ಸ್ಥಳಾವಕಾಶವನ್ನು ನೀಡಬೇಕು, ಶ್ರೀಸಿದ್ದರಾಮೇಶ್ವರ ಮಠಕ್ಕೆ ಯೋಜನಾಪ್ರಾಧಿಕಾರದಿಂದ ಂದು ನಿವೇಶನವನ್ನು ನೀಡಬೇಕು, ಮುಂದಿನ ದಿನಗಳಲ್ಲಿ ಮತ್ತಷ್ಟುಹೆಚ್ಚು ವಿಜೃಂಭಣೆಯಿಂದ ಸಿದ್ದರಾಮೇಶ್ವರ ಜಯಂತಿಯನ್ನು ಆಚರಿಸಲು ಎಲ್ಲರೂ ಸಹಕರಿಸಬೇಕೆಂದರು.

ಈ ಹಿಂದಿನ ಶಾಸಕರು ನಮ್ಮ ಭೋವಿ ಸಮಾಜದ ಅರ್ಜಿಗಳೆಂದರೆ ಪಕ್ಕಕ್ಕಿಡುತಿದ್ದನ್ನು ಗಮನಿಸಿದ್ದೇನೆ, ಯಾರೇ ಆದರೂ ಜಾತಿ ಮತಗಳ ರಾಜಕಾರಣವನ್ನು ಮಾಡಬಾರದು ಆದರೆ ಹಾಲಿ ಶಾಸಕರು ಸರ್ವಸಮಾಜವನ್ನು ಒಗ್ಗೂಡಿಸಿಕೊಂಡು ಕರೆದೊಯ್ಯುತ್ತಿರುವುದು ಸಂತವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಶ್ರೀಇಮ್ಮಡಿಸಿದ್ದರಾಮೇಶ್ವರ ಸ್ವಾಮೀಜಿಗಳು ಆಶೀರ್ವಚನ ನೀಡಿದರು, ವಿವಿಧ ಬಗೆಯ ಪುಷ್ಪಗಳಿಂದ ಸಿಂಗರಿಸಿದ್ದ ಶ್ರೀಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಪುಷ್ಪನಮನ ಸಲ್ಲಿಸಲಾಯಿತು. ಸಮುದಾಯದ ಮುಖಂಡ ಮಹದೇವಪುರ ಚಿಕ್ಕಣ್ಣ ಮಾತನಾಡಿ ಸಮುದಾಯಕ್ಕೆ ಶಾಸಕರ ಕಾರ್ಯವೈಖರಿ ಮತ್ತು ಕೊಡುಗೆ ತಿಳಿಸಿ ಮತ್ತಷ್ಟುಅಭಿವೃದ್ದಿಗೆ ಸಹಕರಿಸುವಂತೆ ಮನವಿ ಮಾಡಿದರು.

ಸಂದರ್ಭದಲ್ಲಿ ತಹಸೀಲ್ದಾರ್ ಮಲ್ಲೇಶ ಬೀರಪ್ಪ ಪೂಜಾರ, ಭೋವಿಸಮಾಜದ ರಾಜ್ಯಾಧ್ಯಕ್ಷ ಮಾಕಳಿರವಿ, ಸಾಹಿತಿ ಡಾ.ಚೌಡಯ್ಯ, ನೆ.ಯೋ.ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ನಾಗರಾಜು, ಮಾಜಿ ಅಧ್ಯಕ್ಷ ಎಂ.ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್ ಗಣೇಶ್, ಗ್ರಾಪಂ ಮಾಜಿಧ್ಯಕ್ಷರಾದ ಟಿ.ರಾಜಣ್ಣ , ಸವಿತಾ ವೆಂಕಟೇಶ್, ಗುರುಸಿದ್ದಪ್ಪ , ಮಾಜಿ ಸದಸ್ಯ ಮಲ್ಲಾಪುರ ಶಿವಣ್ಣ , ರಮೇಶ್, ಟಿ.ವೆಂಕಟೇಶ್, ಜಿಪಂ ಮಾಜಿ ಸದಸ್ಯ ಎಂ.ಎನ್.ರಾಮ್, ಮುಖಂಡರಾದ ಮಾರುತಿ, ಚೇತನ್, ಟಿ.ವೆಂಕಟೇಶ್, ಗುತ್ತಿಗೆದಾರರಾದ ದೀಪು, ಸಿಎಂ.ಗೌಡ, ವೆಂಕಟರಾಜು, ಗೋವರ್ಧನ್, ಮತ್ತಿತರರು ಉಪಸ್ಥಿತರಿದ್ದರು.

**ಕಾಂಗ್ರೆಸ್ ಶಾಸಕರ ಓಲೈಕೆಗೆ ಮೈತ್ರಿ ನಾಯಕರ ವಿರುದ್ಧವೇ ಕಿಡಿ ಕಾರಿದ ಎಂ.ವಿ.ನಾಗರಾಜು**

## ಕೊಲೆ ಆರೋಪಿ ಡೆತ್ ನೋಟ್ ಬರೆದಿಟ್ಟು ನೇಣಿಗೆ ಶರಣು

**ದೊಡ್ಡಬಳ್ಳಾಪುರ:** ಕೊಲೆ ಪ್ರಕರಣದ ಆರೋಪಿ ಡೆತ್ ನೋಟ್ ಬರೆದಿಟ್ಟು ನೇಣಿಗೆ ಶರಣಾಗಿರುವ ಘಟನೆ ದೊಡ್ಡಬಳ್ಳಾಪುರ ತಾಲೂಕಿನ ಕೋಳೂರು ಗ್ರಾಮದಲ್ಲಿ ನಿನ್ನೆ ರಾತ್ರಿ ಸುಮಾರು 10 ಗಂಟೆ ವೇಳೆಗೆ ನಡೆದಿದೆ.

ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯನ್ನು ವೀರಭದ್ರಪ್ಪ (65) ಎಂದು ಗುರುತಿಸಲಾಗಿದ್ದು, ಈತ ಜ.12ರಂದು ಬೆಂಗಳೂರು ಉತ್ತರ ತಾಲೂಕಿನ ಕುದುರೆಗೆರೆ ಗ್ರಾಮದಲ್ಲಿ 55 ವರ್ಷದ ದ್ರಾಕ್ಷಾಯಿಣಿ ಎಂಬ ಮಹಿಳೆಯನ್ನು ಹಾಡಹಗಲೇ ಕೊಡಲಿಯಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿದ್ದ ಪ್ರಕರಣದ ಆರೋಪಿ ಆಗಿದ್ದ. ಕೊಲೆ ಬಳಿಕ ಪೊಲೀಸರಿಗೆ ಸಿಗದೆ ಪರಾರಿಯಾಗಿದ್ದ ವೀರಭದ್ರಪ್ಪ, ತಡರಾತ್ರಿ ತನ್ನ ಸ್ವಗ್ರಾಮ ಕೋಳೂರು ಗ್ರಾಮದ ಹೊರವಲಯದಲ್ಲಿರುವ ಬೇವಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ.

ಸ್ಥಳದಲ್ಲಿ ಡೆತ್ ನೋಟ್ ಪತ್ತೆಯಾಗಿದ್ದು, ಮೃತದೇಹವನ್ನು ಶವಾಗಾರಕ್ಕೆ ರವಾನಿಸಲಾಗಿದೆ. ಈ ಸಂಬಂಧ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.




Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.